**ಹೆಂಡತಿ:** ಮದುವೆಗೆ ಮೊದಲು ಪ್ರತಿ ಸೋಮವಾರ ಉಪವಾಸ ಮಾಡ್ತಿದ್ದೆ.
**ಗಂಡ:** ಮತ್ತೆ ಈಗ್ಯಾಕೆ ನಿಲ್ಲಿಸಿದೆ.
**ಹೆಂಡತಿ:** ನಿಮ್ಮನ್ನು ಮದುವೆ ಆದ ಮೇಲೆ ಅದರ ಮೇಲೆ ನಂಬಿಕೆನೇ ಹೊರಟು ಹೋಯ್ತು.

**ಸೀತಮ್ಮ:** ಯಾಕ್ರೀ... ರಾಧಮ್ಮ ನೀವೇ ಪಾತ್ರೆ ತೊಳೆತಿದ್ದೀರಾ? ನಿಮ್ಮ ಮನೆಕೆಲಸದವಳು ಇಲ್ಲವೇ?
**ರಾಧಮ್ಮ:** ಇಲ್ಲಾರಿ, ನಾನೇ ಬೇಡಾಂತ ಬಿಡಿಸಿಬಿಟ್ಟೆ.
**ಸೀತಮ್ಮ:** ಯಾಕೆ, ಚೆನ್ನಾಗೇ ಇದ್ದಳಲ್ಲ?
**ರಾಧಮ್ಮ:** ನಮ್ಮೆಜಮಾನರೂ ಇದೇ ಮಾತನ್ನು ಹೇಳಲಿಕ್ಕೆ ಶುರು ಮಾಡಿದ್ರು ಅದಕ್ಕೆ.

**ಮ್ಯಾನೇಜರ್:** ರಾಮು ಇವತ್ತು ಸೀನು ಯಾಕೆ ಆಫೀಸಿಗೆ ಬಂದಿಲ್ಲ?
**ರಾಮು:** ಸರ್ ಅವನಿಗೆ ವಿಪರೀತ ಗಾಯಗಳಾಗಿವೆ. ಆಸ್ಪತ್ರೆಗೆ ಸೇರಿಸಿದ್ದಾರೆ.
**ಮ್ಯಾನೇಜರ್:** ಸುಳ್ಳು ಹೇಳಬೇಡಿ. ನಿನ್ನೆ ರಾತ್ರಿ ಲೇಟ್‌ನೈಟ್ ಪಾರ್ಟಿಯಲ್ಲಿ ಒಂದು ಹುಡುಗಿ ಜೊತೆ ಕುಣಿತಾ ಇದ್ದದ್ದನ್ನ ನಾನೇ ನನ್ನ ಕಣ್ಣಾರೆ ನೋಡಿದ್ದೀನಿ.
**ರಾಮು:** ಹೌದು ಸರ್! ಅವನು ಆ ಹುಡುಗಿ ಜೊತೆ ಡಾನ್ಸ್ ಮಾಡುತ್ತಿದ್ದದ್ದನ್ನು ಅವನ ಹೆಂಡತಿಯೂ ನೋಡಿದ್ದಳು.

**ಹೆಂಡತಿ:** ರೀ... ಎಲ್ಲಿದ್ದೀರಾ?
**ಗಂಡ:** ಯಾಕೆ?
**ಹೆಂಡತಿ:** ಪಕ್ಕದ ಮನೆಯಾಕೆ ನಿಮಗೋಸ್ಕರ ಬಂದಿದ್ದಾರೆ.
**ಗಂಡ:** (ಖುಷಿಯಿಂದ) ಬಂದೇ ತಡಿ ಎರಡು ನಿಮಿಷ.
ಓಡುತ್ತಾ ಮನೆಗೆ ಬಂದ.
**ಹೆಂಡತಿ:** ನಿಮ್ಮ ತಂಗಿ ಕೊರಿಯರ್‌ನಲ್ಲಿ ರಾಖಿ ಕಳುಹಿಸಿದ್ದಳು. ಅದನ್ನು ನಾನು ಹೇಗೆ ಕಟ್ಟಲಿ? ಅದಕ್ಕೆ ಪಕ್ಕದ ಮನೆಯಾಕೆಯನ್ನು ಕರೆಸಿದೆ.

**ಗುಂಡ:** ನಿಮ್ಮ ಕವನ ಅಂದರೆ ನನಗೆ ಬಹಳ ಇಷ್ಟ ಸರ್!
**ಕವಿ:** ತುಂಬಾ ಸಂತೋಷ. ಯಾವುದು ಇಷ್ಟ?
**ಗುಂಡ:** ಅದೇ ನಿಮ್ಮ ಮಗಳು ಕವನ.

ಕಾವೇರಿ ನದಿ ನೀರು ವಿವಾದ



ನೀರಿನ ಗುಣಲಕ್ಷಣಗಳ ಪ್ರಶ್ನೆಗೆ ಹೋರಾಟ, ನ್ಯಾಯಾಲಯ, ತೀರ್ಪು, ಶಿಫಾರಸು, ನೀರು ಜನರನ್ನು ಪ್ರತ್ಯೇಕಿಸುತ್ತದೆ ಎಂದೆಲ್ಲಾ ಉತ್ತರ ಬರೆದಿದ್ದಾನಂತೆ!




ತೈಲ ಖನಿಜಗಳ ಅನ್ವೇಷಣೆಗೆ ಸಮುದ್ರಯಾನ



ಕೆಲವೇ ದೇಶಗಳ ಸಾಧನೆಯನ್ನು ಚಂದ್ರಯಾನ, ಸೂರ್ಯಯಾನ ಮತ್ತು ಈಗ ನಾವು ಜಲಯಾನದ ಮೂಲಕ ತೋರಿಸ್ತಿದ್ದೇವೆ!

**ತಿಮ್ಮ:** ಕಾಲಿಲ್ಲದ ಟೇಬಲ್ ಯಾವುದು?
**ಗುಂಡ:** ಟೈಮ್ ಟೇಬಲ್ ಕಣೋ.

**ಸೇಲ್ಸ್‌ಮ್ಯಾನ್:** ಸರ್ ಇದು ಇರುವೆ ಪೌಡರ್ ತಗೊಳ್ಳಿ.
**ಗುಂಡ:** ಬೇಡಪ್ಪಾ ಇವತ್ತು ಪೌಡರ್ ಕೊಡಿಸಿದ್ರೆ ನಾಳೆ ಲಿಪ್‌ಸ್ಟಿಕ್ ಕೇಳ್ತಾವೆ ಆಗೇನು ಮಾಡಲಿ.

**ಮಗ:** ಅಪ್ಪ ನಾವು ಯಾರದಾದ್ರು ಮನೆಗೆ ಹೋದಾಗ ನಮಗೆ ಕುಡಿಯೋಕೆ ಸೇಬು ಹಣ್ಣಿನ ರಸ ಕೊಡ್ತಾರೆ ಅಂತಿಟ್ಕೊ. ಅದಕ್ಕೆ ನಾವು ಏನಂತ ಹೇಳಬೇಕು?
**ಅಪ್ಪ:** ಆ್ಯಪಲ್ ಜ್ಯೂಸ್ ಅಂತ ಹೇಳಬೇಕು.
**ಮಗ:** ಕಿತ್ತಳೆ ಹಣ್ಣಿನ ರಸ ಕೊಟ್ಟರೆ?
**ಅಪ್ಪ:** ಆರೆಂಜ್ ಜ್ಯೂಸ್!
**ಮಗ:** ನಿಂಬೆ ಹಣ್ಣಿನ ರಸ ಕೊಟ್ಟರೆ?
**ಅಪ್ಪ:** ಲೆಮನ್ ಜ್ಯೂಸ್
**ಮಗ:** ಅಪ್ಪ ಬರೀ ನೀರು ಕೊಟ್ರೆ?
**ಅಪ್ಪ:** ಕಂಜೂಸ್!

**ಬಾಯ್ ಫ್ರೆಂಡ್:** ನಾನು ನಿನ್ನೆ ನಿಮ್ಮ ಮನೆಗೆ ಹೋಗಿದ್ದೆ. ಅಲ್ಲಿಗೆ ಹೋದ ಮೇಲೆ, ನಮ್ಮ ಮದುವೆ ಆಗೋದು ಡೌಟು ಅನಿಸ್ತು.
**ಗರ್ಲ್ ಫ್ರೆಂಡ್:** ಯಾಕೆ ಬೇಬಿ ಏನಾಯ್ತು, ನಮ್ಮ ಅಪ್ಪ ಅಮ್ಮ ಏನಾದ್ರೂ ಹೇಳಿದ್ರಾ?
**ಬಾಯ್ ಫ್ರೆಂಡ್:** ಅಯ್ಯೊ ಅವರ‍್ಯಾರೂ ಮನೆಯಲ್ಲಿ ಇರಲಿಲ್ಲ. ನಿನ್ನ ತಂಗಿ ಮಾತ್ರ ಇದ್ಲು. ಅವಳು ನೋಡೋಕೆ ನಿನಗಿಂತ ಸೂಪರ್ ಆಗಿದ್ಲು. ಅದ್ಕೆ ಹಾಗಂದೆ.

**ಗುಂಡ:** ಡಾಕ್ಟ್ರೆ... ನನಗೆ ಇರುವೆ ಕಂಡರೆ ತುಂಬಾ ಭಯವಾಗುತ್ತಿದೆ.
**ಡಾಕ್ಟರ್:** ಹೌದಾ? ಯಾವಾಗಿನಿಂದ ಹೀಗೆ ಆಗುತ್ತಿದೆ?
**ಗುಂಡ:** ನನಗೆ ಶುಗರ್ ಬಂದಾಗಿನಿಂದ.

ಹೆಂಡತಿ ಬೆಳಗ್ಗೆ ಎದ್ದ ಕೂಡಲೆ ಅಲಂಕಾರ ಮಾಡಿಕೊಳ್ಳಲು ಶುರು ಮಾಡಿದಳು.
**ಗಂಡ:** ನಿನಗೇನು ಹುಚ್ಚು ಹಿಡಿದಿದೆಯಾ? ಬೆಳ್‌ಬೆಳಗ್ಗೆ ಮೇಕಪ್ ಮಾಡ್ಕೊತಿದ್ದೀಯಾ?
**ಹೆಂಡತಿ:** ಬಾಯಿ ಮುಚ್ಚಿ ಸಾಕು. ನನ್ನ ಫೋನ್ ಲಾಕ್ ಓಪನ್ ಮಾಡಬೇಕು. ಅದು ನನ್ನ ಮುಖ ಗುರುತು ಹಿಡೀತಿಲ್ಲ.

ಸಂಗ್ರಹ: ಶರದ ಕುಲಕರ್ಣಿ, ಬೀದರ್